# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 505 |
| ಸದಸ್ಯರ ಹೆಸರು | : | ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 16-09-2022 |
| ಉತ್ತರಿಸುವವರು | : | ಮಾನ್ಯ ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>1</td><td>ಕರ್ನಾಟಕ ಸ್ಟೇಟ್ ವಾಲಿಬಾಲ್ ಅಸೋಸಿಯೇಷನ್ ಮತ್ತು ವಾಲಿಬಾಲ್ ಫೆಡರೇಷನ್ ಆಫ್ ಇಂಡಿಯಾದಿಂದ ಆಯ್ಕೆಗೊಂಡು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಾಲಿಬಾಲ್ ಕ್ರೀಡಾಕೂಟಗಳಲ್ಲಿ ಪ್ರಶಸ್ತಿ ವಿಜೇತ ಕ್ರೀಡಾಪಟುಗಳಿಗೆ ಸರ್ಕಾರವು ಮಾನ್ಯತೆಯನ್ನು ನೀಡುತ್ತಿದೆಯೇ: (ಮಾಹಿತಿಯನ್ನು ನೀಡುವುದು)</td><td>ಕರ್ನಾಟಕ ಸ್ಟೇಟ್ ವಾಲಿಬಾಲ್ ಅಸೋಸಿಯೇಷನ್ ಮತ್ತು ವಾಲಿಬಾಲ್ ಫೆಡರೇಷನ್ ಆಫ್ ಇಂಡಿಯಾದಿಂದ ಆಯ್ಕೆಗೊಂಡು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಾಲಿಬಾಲ್ ಕ್ರೀಡಾಕೂಟಗಳಲ್ಲಿ ಪ್ರಶಸ್ತಿ ವಿಜೇತ ಕ್ರೀಡಾಪಟುಗಳಿಗೆ ರಾಜ್ಯ ಸರ್ಕಾರವು ಮಾನ್ಯತೆ ನೀಡುತ್ತಿದೆ.<br>ಪ್ರಸ್ತುತ [ಅಂದರೆ 2020ರಿಂದ] ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ, ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ರಾಷ್ಟ್ರೀಯ ವಾಲಿಬಾಲ್ ಫೆಡರೇಷನ್ ಸಂಸ್ಥೆಯು ಅಸ್ತಿತ್ವದಲ್ಲಿರುವುದಿಲ್ಲ. ಈ ಹಿನ್ನೆಲೆಯಲ್ಲಿ ವಾಲಿಬಾಲ್ ಕ್ರೀಡಾಪಟುಗಳಿಗೆ ಈ ಸೌಲಭ್ಯವನ್ನು ಒದಗಿಸಿರುವುದಿಲ್ಲ. ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ, ಭಾರತ ಸರ್ಕಾರದಿಂದ ರಾಷ್ಟ್ರೀಯ ವಾಲಿಬಾಲ್ ಫೆಡರೇಷನ್ ಮಾನ್ಯತೆ ನೀಡಿದ್ದಲ್ಲಿ ರಾಜ್ಯ ಸರ್ಕಾರದಿಂದ ಒದಗಿಸಲಾಗುತ್ತಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗುವುದು.</td></tr>
<tr><td>2</td><td>ಹಾಗಿದ್ದಲ್ಲಿ ಸರ್ಕಾರ ವಾಲಿಬಾಲ್ ಕ್ರೀಡಾಪಟುಗಳಿಗೆ ನೀಡುತ್ತಿರುವ ಸೌಲಭ್ಯಗಳಾವುವು; (ವಿವರವನ್ನು ನೀಡುವುದು)</td><td>ಸರ್ಕಾರದ ಮಾರ್ಗಸೂಚಿಯನುಸಾರ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ ಏಕಲವ್ಯ, ಪ್ರಶಸ್ತಿ, ನಗದು ಪುರಸ್ಕಾರ, ಶೈಕ್ಷಣಿಕ ಶುಲ್ಕ ಮರುಪಾವತಿ ಮತ್ತು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ನೀಡಲಾಗುತ್ತಿದೆ.<br>ವಾಲಿಬಾಲ್ ಕ್ರೀಡಾಪಟುಗಳಿಗೆ ವಿವಿಧ ಯೋಜನೆಗಳ ಅಡಿ ಸೌಲಭ್ಯಗಳನ್ನು ನೀಡಲಾದ ವಿವರ.<br>
<table>
<tr><th>ಕ್ರ. ಸಂ.</th><th>ವರ್ಷ</th><th>ಏಕಲವ್ಯ ಪ್ರಶಸ್ತಿ</th><th>ಜೀವಮಾನ ಪ್ರಶಸ್ತಿ</th><th>ನಗದು ಪುರಸ್ಕಾರ</th><th>ಕ್ರೀಡಾ ವಿದ್ಯಾರ್ಥಿ ವೇತನ</th><th>ಶೈಕ್ಷಣಿಕ ಶುಲ್ಕ ಮರು ಪಾವತಿ</th></tr>
<tr><td>1</td><td>1992-2020</td><td>23</td><td>-</td><td>-</td><td>-</td><td>-</td></tr>
<tr><td>2</td><td>2009-2020</td><td>-</td><td>02</td><td>-</td><td>-</td><td>-</td></tr>
<tr><td>3</td><td>2013 -14</td><td>-</td><td>-</td><td>20</td><td>-</td><td>-</td></tr>
<tr><td>4</td><td>2014</td><td>-</td><td>-</td><td>-</td><td>10</td><td>-</td></tr>
<tr><td>5</td><td>2015-16</td><td>-</td><td>-</td><td>-</td><td>-</td><td>05</td></tr>
<tr><td>6</td><td>2017 ರಿಂದ2020</td><td>-</td><td>-</td><td>35</td><td>36</td><td>-</td></tr>
<tr><td>7</td><td>2018-19</td><td>-</td><td>-</td><td>-</td><td>-</td><td>-</td></tr>
<tr><td>8</td><td>2019-20</td><td>-</td><td>-</td><td>-</td><td>-</td><td>02</td></tr>
<tr><td>9</td><td>2020-21 ಮತ್ತು2021-22</td><td>-</td><td>-</td><td>-</td><td>-</td><td>03</td></tr>
<tr><td></td><td>ಒಟ್ಟು</td><td>23</td><td>02</td><td>55</td><td>46</td><td>10</td></tr>
</table></td></tr>
<tr><td>3</td><td>ಇಲ್ಲವಾದಲ್ಲಿ, ವಾಲಿಬಾಲ್ ಕ್ರೀಡೆಯನ್ನು ಸರ್ಕಾರ ಮಾನ್ಯ ಮಾಡದಿರಲು ಕಾರಣವೇನು;ವಾಲಿಬಾಲ್ ಕ್ರೀಡೆಯನ್ನು ಉತ್ತೇಜಿಸಲು ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳೇನು? (ಸಂಪೂರ್ಣ ಮಾಹಿತಿಯನ್ನು ನೀಡುವುದು)</td><td>ಉದ್ಭವಿಸುವುದಿಲ್ಲ.</td></tr>
</table>

**ವೈಎಸ್ ಡಿ-ಇಬಿಬಿ/124/2022**

**(ಡಾ. ನಾರಾಯಣಗೌಡ)**
ರೇಷ್ಮೆ, ಯುವಸಬಲೀಕರಣ ಮತ್ತು ಕ್ರೀಡಾ ಸಚಿವರು